# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಂಯೋಜಿತ ಪ್ಯಾರಾ ಮೆಡಿಕಲ್ ಕಾಲೇಜುಗಳು ಪಡೆಯುತ್ತಿರುವ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

---

**ಓದಲಾಗಿದೆ:**

1. ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರ ಪತ್ರ ಸಂಖ್ಯೆ:PMB/85/2012-13, ದಿನಾಂಕ 21.01.2013.

**ಪ್ರಸ್ತಾವನೆ:**

ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಮಾನ್ಯತೆ ಪಡೆದ ಸಂಯೋಜಿತ ಪ್ಯಾರಾ ಮೆಡಿಕಲ್ ಕಾಲೇಜುಗಳು ವಿದ್ಯಾರ್ಥಿಗಳಿಂದ ಪ್ರಸ್ತುತ ಪಡೆಯುತ್ತಿರುವ ಶುಲ್ಕದಿಂದ ಕಾಲೇಜು ನಿರ್ವಹಣೆ ಮಾಡಲು ಕಷ್ಟಸಾಧ್ಯವಾಗಿರುವುದರಿಂದ ಶುಲ್ಕವನ್ನು ಹೆಚ್ಚಿಸಬೇಕೆಂದು ದಿನಾಂಕ 30.11.2012 ರಂದು ನಡೆದ ಮಂಡಳಿ ಸಭೆಯಲ್ಲಿ ಕರ್ನಾಟಕ ಪ್ಯಾರಾ ಮೆಡಿಕಲ್ ಕಾಲೇಜು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಕೋರಿರುತ್ತದೆಂದು, ಅದರನ್ವಯ, ಸದರಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಕೆಳಕಂಡಂತೆ ನಮೂದಿಸಲಾದ ಶುಲ್ಕವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಅನುಮೋದಿಸಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಅಲ್ಲದೆ, ಪ್ರಸ್ತುತ ಇರುವ ಶುಲ್ಕದ ವಿವರಗಳು ಹಾಗೂ ಕಾಲಕಾಲಕ್ಕೆ ಪರಿಷ್ಕರಿಸಬೇಕಾದ ಶುಲ್ಕದ ವಿವರಗಳನ್ನು ಕೆಳಕಂಡಂತೆ ನೀಡಿರುತ್ತಾರೆ.

| ಸೀಟುಗಳ ವಿವರ | ಪ್ರಸ್ತುತ ಇರುವ ಮೊತ್ತ | 2013-14 ನೇ ಸಾಲಿಗೆ ಪರಿಷ್ಕರಿಸಲಾದ ಮೊತ್ತ | 2014-15 ನೇ ಸಾಲಿಗೆ ಪರಿಷ್ಕರಿಸಲಾದ ಮೊತ್ತ |
|---|---|---|---|
| 1. ಸರ್ಕಾರಿ ಕಾಲೇಜಿನ ಸರ್ಕಾರಿ ಸೀಟುಗಳಿಗೆ | ರೂ.2500/- ರಿಂದ ರೂ.3000/- | ರೂ.3000/- ರಿಂದ ರೂ.4000/- | ರೂ.4000/- ರಿಂದ ರೂ.5000/- |
| 2. ಖಾಸಗಿ ಕಾಲೇಜಿನ ಸರ್ಕಾರಿ ಸೀಟುಗಳಿಗೆ | ರೂ.4500/- ರಿಂದ ರೂ.6000/- | ರೂ.6000/- ರಿಂದ ರೂ.8000/- | ರೂ.8000/- ರಿಂದ ರೂ.10000/- |
| 3. ಆಡಳಿತ ಮಂಡಳಿಯ ಸೀಟುಗಳಿಗೆ | ರೂ.15000/- ರಿಂದ ರೂ.18000/- | ರೂ.18000/- ರಿಂದ 20000/- | ರೂ.20000/ ರಿಂದ ರೂ.25000/- |

ಮುಂದುವರೆದು, ಈ ಸಂಬಂಧಿತವಾಗಿ ಮಾನ್ಯತೆ ಪಡೆದ ಸಂಯೋಜಿತ ಪ್ಯಾರಾ ಮೆಡಿಕಲ್ ಕಾಲೇಜುಗಳು 2014-15 ನೇ ಸಾಲಿನಲ್ಲಿ ಪಡೆಯಬಹುದಾದ ಪರಿಷ್ಕೃತ ಶುಲ್ಕದಂತೆಯೇ 2015-16 ನೇ ಸಾಲಿಗೂ ಪರಿಷ್ಕರಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಆದರೆ, ದಿನಾಂಕ 30.11.2012 ರಂದು ವೈದ್ಯಕೀಯ ಶಿಕ್ಷಣ ನಿರ್ದೇಶಕರ ಕೊಠಡಿಯಲ್ಲಿ ಜರುಗಿದ ಅರೆ ವೈದ್ಯಕೀಯ ಮಂಡಳಿಯಿಂದ ಮಾನ್ಯತೆ ಹೊಂದಿದ ಪ್ಯಾರಾ ಮೆಡಿಕಲ್ ಕಾಲೇಜುಗಳ ಆಡಳಿತ ಮಂಡಳಿಯವರೊಂದಿಗೆ ನಡೆದ ಸಭೆಯಲ್ಲಿ ಮೇಲೆ ತಿಳಿಸಲಾಗಿರುವ ಶುಲ್ಕವನ್ನು 2013-14 ನೇ ಸಾಲಿಗೆ ಅನ್ವಯವಾಗುವಂತೆ 2014 ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ 2014-15 ನೇ ಸಾಲಿಗೆ ಅನ್ವಯವಾಗುವಂತೆ 2015 ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ರಾಜ್ಯದಲ್ಲಿ ಮಾನ್ಯತೆ ಪಡೆದ ಸಂಯೋಜಿತ ಪ್ಯಾರಾ ಮೆಡಿಕಲ್ ಕಾಲೇಜುಗಳು ವಿದ್ಯಾರ್ಥಿಗಳಿಂದ ಪ್ರಸ್ತುತ ಪಡೆಯುತ್ತಿರುವ ಶುಲ್ಕವನ್ನು 2013-14 ನೇ ಸಾಲಿಗೆ ಮೇಲ್ಕಂಡಂತೆ ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 159 ಎಂಎಂಸಿ 2013, ಬೆಂಗಳೂರು, ದಿನಾಂಕ 24.09.2012**

ರಾಜ್ಯದಲ್ಲಿ ಮಾನ್ಯತೆ ಪಡೆದ ಸಂಯೋಜಿತ ಪ್ಯಾರಾ ಮೆಡಿಕಲ್ ಕಾಲೇಜುಗಳು ವಿದ್ಯಾರ್ಥಿಗಳಿಂದ ಪ್ರಸ್ತುತ ಪಡೆಯುತ್ತಿರುವ ಶುಲ್ಕವನ್ನು 2013-14 ನೇ ಸಾಲಿಗೆ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

| ಸೀಟುಗಳ ವಿವರ | ಪ್ರಸ್ತುತ ಇರುವ ಮೊತ್ತ | 2013-14 ನೇ ಸಾಲಿಗೆ ಪರಿಷ್ಕರಿಸಲಾದ ಮೊತ್ತ |
|---|---|---|
| 1. ಸರ್ಕಾರಿ ಕಾಲೇಜಿನ ಸರ್ಕಾರಿ ಸೀಟುಗಳಿಗೆ | ರೂ.2500/- ರಿಂದ ರೂ.3000/- | ರೂ.3000/- ರಿಂದ ರೂ.4000/- |
| 2. ಖಾಸಗಿ ಕಾಲೇಜಿನ ಸರ್ಕಾರಿ ಸೀಟುಗಳಿಗೆ | ರೂ.4500/- ರಿಂದ ರೂ.6000/- | ರೂ.6000/- ರಿಂದ ರೂ.8000/- |
| 3. ಆಡಳಿತ ಮಂಡಳಿಯ ಸೀಟುಗಳಿಗೆ | ರೂ.15000/- ರಿಂದ ರೂ.18000/- | ರೂ.18000/- ರಿಂದ ರೂ.20000/- |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

([illegible])
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ / ಲೆಕ್ಕಪರಿಶೋಧನೆ 1 ಮತ್ತು 2), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-09.
3. ಸದಸ್ಯ ಕಾರ್ಯದರ್ಶಿ, ಅರೆ ವೈದ್ಯಕೀಯ ಮಂಡಳಿ, ಲಕ್ಷ್ಮೀ ಕಾಂಪ್ಲೆಕ್ಸ್, ಮೊದಲನೇ ಮಹಡಿ, ವಾಣಿ ವಿಲಾಸ ಆ ಎದುರು, ಬೆಂಗಳೂರು 560002.
4. ಪ್ರಾಂಶುಪಾಲರು, ರಾಜ್ಯದ ಎಲ್ಲಾ ಖಾಸಗಿ ಪ್ಯಾರಾ ಮೆಡಿಕಲ್ ಸಂಸ್ಥೆಗಳು - ಪ್ಯಾರಾ ಮೆಡಿಕಲ್ ಬೊ ಮುಖಾಂತರ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.